**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು**

**ಸಂಖ್ಯೆ: 16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,**

**ಬೆಂಗಳೂರು–560052**

**ಪತ್ರಿಕಾ ಪ್ರಕಟಣೆ**

**2019–20ನೇ ಸಾಲಿನ ವಿದ್ಯುಚ್ಛಕ್ತಿದರ ಪರಿಷ್ಕರಣೆ:**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಆರ್ಥಿಕ ವರ್ಷ 2019–20ರ (1ನೇ ಏಪ್ರಿಲ್, 2019 ರಿಂದ 31ನೇ ಮಾರ್ಚ್, 2020 ರವರೆಗೆ) ವಿದ್ಯುಚ್ಛಕ್ತಿ ದರಗಳ ಪರಿಷ್ಕರಣೆಯನ್ನು ಅನುಮೋದಿಸಿದೆ. ಆಯೋಗವು ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) ಮಂಗಳೂರು ಮತ್ತು ಬೆಳಗಾವಿ ಜಿಲ್ಲೆಯಲ್ಲಿನ ಏಕಸ್ ವಿಶೇಷ ಆರ್ಥಿಕ ವಲಯ (AEQUS SEZ) ಗಳ ಗ್ರಾಹಕರಿಗೆ ಅನ್ವಯವಾಗುವ ಪರಿಷ್ಕೃತ ಚಿಲ್ಲರೆ ವಿದ್ಯುಚ್ಛಕ್ತಿ ದರಗಳನ್ನೂ ಸಹ ನಿರ್ಧರಿಸಿದೆ. ಆರ್ಥಿಕ ವರ್ಷ 2019–20 ರಿಂದ 2021–22 ರ ಅವಧಿಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಕ.ವಿ.ಪ್ರ.ನಿ.ನಿ. (KPTCL) ವಸೂಲಿ ಮಾಡಬೇಕಾದ ವಿದ್ಯುಚ್ಛಕ್ತಿ ಪ್ರಸರಣ ದರಗಳನ್ನೂ ಸಹ ಪರಿಷ್ಕರಿಸಲಾಗಿದೆ. ಈ ಪರಿಷ್ಕೃತ ದರಗಳು ದಿನಾಂಕ 01.04.2019 ಅಥವಾ ಅದರ ನಂತರದ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಮಾಡಿದ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.

ವಿದ್ಯುತ್ ಸರಬರಾಜು ಕಂಪನಿಗಳು ಈ ಮುಂದಿನಂತೆ ಎಲ್ಲಾ ಪ್ರವರ್ಗಗಳ ಗ್ರಾಹಕರಿಗೆ ಪ್ರತಿ ಯೂನಿಟ್ಟಿಗೆ 100 ರಿಂದ 167 ಪೈಸೆಗಳ ವಿಭಿನ್ನ ಏರಿಕೆಯನ್ನು ಕೋರಿದ್ದವು:

| ವಿದ್ಯುತ್ ಸರಬರಾಜು ಕಂಪನಿಯ ಹೆಸರು | ಆದಾಯದಲ್ಲಿನ ಯೋಜಿತ ಕೊರತೆ ಕೋಟಿ ರೂ. | ಯೋಜಿತ ವಿದ್ಯುಚ್ಛಕ್ತಿ ಮಾರಾಟ ದಶಲಕ್ಷ ಯೂನಿಟ್ | ಏರಿಕೆ ಪ್ರತಿ ಯೂನಿಟ್ಟಿಗೆ | ಯೋಜಿತ ಹಾಲಿ ಆದಾಯ ಕೋಟಿ ರೂ. | ಶೇಕಡ ಏರಿಕೆ |
|---|---|---|---|---|---|
| ಬೆ.ವಿ.ಸ.ಕಂ | 2,932.24 | 28,911.76 | 101 | 20,744.01 | 14.14 |
| ಮ.ವಿ.ಸ.ಕಂ | 706.39 | 5,134.92 | 138 | 3,447.12 | 20.49 |
| ಚಾ.ವಿ.ಸ.ನಿ.ನಿ | 630.75 | 6,335.35 | 100 | 4,198.03 | 15.02 |
| ಹು.ವಿ.ಸ.ಕಂ | 1,980.09 | 11,887.78 | 167 | 8,027.16 | 24.67 |
| ಗು.ವಿ.ಸ.ಕಂ | 968.41 | 7,636.51 | 127 | 5,125.48 | 18.89 |
| **ಒಟ್ಟು** | **7,217.88** | **59,906.32** | **120** | **41,541.80** | **17.37** |

ಮೇಲಿನ ಆಧಾರದಲ್ಲಿ, ರಾಜ್ಯದಲ್ಲಿ ಸರಾಸರಿ ವಿದ್ಯುತ್ ದರದ ಹೆಚ್ಚಳವು ಪ್ರತಿ ಯೂನಿಟ್‌ಗೆ 1.20 ರೂಪಾಯಿಗಳು ಮತ್ತು ಶೇಕಡಾವಾರು ಹೆಚ್ಚಳವು 17.37 ರಷ್ಟು ಆಗುತ್ತದೆ.

ರಾಜ್ಯದಲ್ಲಿ ಇದುವರೆವಿಗೂ ಏಕರೂಪದ ವಿದ್ಯುಚ್ಛಕ್ತಿ ದರಗಳು ರೂಢಿಯಲ್ಲಿರುವುದರಿಂದ, ಆಯೋಗವು ಬೆಸ್ಕಾಂ ಪ್ರದೇಶದಲ್ಲಿ ಸ್ವಲ್ಪ ಪ್ರಮಾಣದಲ್ಲಿ ವಿಭಿನ್ನವಾದ ಏರಿಕೆಯೊಂದಿಗೆ ಮಿಕ್ಕೆಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಹಾಗು HRECSಗೆ ಏಕರೂಪದ ಏರಿಕೆಯನ್ನು ಅನುಮೋದಿಸಿದೆ ಮತ್ತು ವಿವಿಧ ಹಂತಗಳಲ್ಲಿನ ವಿದ್ಯುತ್ ದರಗಳ ಏರಿಕೆ ಪ್ರತಿ ಯೂನಿಟ್‌ಗೆ 15 ಪೈಸೆಯಿಂದ 30 ಪೈಸೆಯವರೆಗೆ ಇರುತ್ತದೆ. ನಿಗದಿತ ಶುಲ್ಕ ಸೇರಿದಂತೆ ವಿದ್ಯುಚ್ಛಕ್ತಿ ದರದಿಂದ ವಸೂಲಿಯಾಗುವ ಮೊತ್ತದಲ್ಲಿ, ಎಲ್ಲಾ ಎಸ್ಕಾಂಗಳಲ್ಲಿ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ಸರಾಸರಿ **33** ಪೈಸೆಗಳ ಮತ್ತು ಶೇಕಡ **4.80** ರ ಏರಿಕೆ ಇರುತ್ತದೆ.

ಹಾಲಿ ಇರುವ ವಿದ್ಯುಚ್ಛಕ್ತಿ ದರಗಳ ವ್ಯವಸ್ಥೆಯಲ್ಲಿ ಗ್ರಾಹಕರಿಂದ ವಸೂಲಿಯಾಗುವ ನಿಗದಿತ ಶುಲ್ಕ (fixed charges) ವಿದ್ಯುತ್ ಸರಬರಾಜು ಕಂಪನಿಗಳ ಹಾಗು HRECSನ ವಾಸ್ತವ ನಿಗದಿತ ಖರ್ಚಿಗೆ (fixed cost) ಸಮನಾಗಿರುವುದಿಲ್ಲ. ನಿಗದಿತ ಖರ್ಚಿನ ಒಂದು ಭಾಗವನ್ನು ಮಾತ್ರ ನಿಗದಿತ ಶುಲ್ಕವೆಂದು ವಸೂಲಿ ಮಾಡಲಾಗುತ್ತಿದೆ. ನಿಗದಿತ ಖರ್ಚಿನ ಶೇಕಡ 24.70 ರಷ್ಟು ಮಾತ್ರ ಹಾಲಿ ವಸೂಲಿಯಾಗುತ್ತಿದ್ದು, ಬಾಕಿ ನಿಗದಿತ ಖರ್ಚನ್ನು ವಿದ್ಯುಚ್ಛಕ್ತಿ ಶುಲ್ಕದ ಮೂಲಕ ವಸೂಲು ಮಾಡಲಾಗುತ್ತಿರುತ್ತದೆ. ಆದುದರಿಂದ ನಿಗದಿತ ಶುಲ್ಕವನ್ನು ವರ್ಷದಿಂದ ವರ್ಷಕ್ಕೆ ಕ್ರಮೇಣವಾಗಿ ಹೆಚ್ಚಿಸಲು ಆಯೋಗವು ನಿರ್ಧರಿಸಿರುತ್ತದೆ. ಅದರಂತೆ ಆಯೋಗವು ಎಲ್ಲಾ ಸ್ಥಾವರಗಳಿಗೆ ಸಂಬಂಧಪಟ್ಟಂತೆ (ನೀರಾವರಿ ಪಂಪ್ ಸೆಟ್ ಸ್ಥಾವರಗಳನ್ನು ಹೊರತುಪಡಿಸಿ) ನಿಗದಿತ ಶುಲ್ಕವನ್ನು ಪ್ರತಿ ಕಿ.ವ್ಯಾ. / ಹೆಚ್.ಪಿ. / ಕೆ.ವಿ.ಎ.ಗೆ ರೂ.5/- ರಿಂದ ರೂ.10/-

ರವರೆಗಿನ ಕನಿಷ್ಠ ಏರಿಕೆಯನ್ನು ಅನುಮೋದಿಸಿದೆ. ನಿಗದಿತ ಶುಲ್ಕದಲ್ಲಿನ ಈ ಕನಿಷ್ಠ ಏರಿಕೆಯೊಂದಿಗೆ, ನಿಗದಿತ ಖರ್ಚಿನ ಚೇತರಿಕೆಯು ಶೇಕಡ 27.73 ರಷ್ಟಿರುತ್ತದೆ.

ವಿದ್ಯುತ್ ಸರಬರಾಜು ಕಂಪನಿಗಳು ಆಯೋಗಕ್ಕೆ ಸಲ್ಲಿಸಿದ ಪ್ರಸ್ತಾಪನೆಯಂತೆ, ಈ ಕೆಳಗಿನ ಕಾರಣಗಳಿಂದಾಗಿ ದರ ಏರಿಕೆಯು ಅನಿವಾರ್ಯವಾಗಿರುತ್ತದೆ:

1) ಹೊಸ ಉಷ್ಣ ವಿದ್ಯುತ್ ಕೇಂದ್ರಗಳಿಂದ ಖರೀದಿಸುವ ವಿದ್ಯುತ್ ದರದಲ್ಲಿನ ಏರಿಕೆ, ನವೀಕರಿಸಬಹುದಾದ ಇಂಧನ ಮೂಲಗಳಿಂದ ಖರೀದಿಸುವ ವಿದ್ಯುತ್ ದರದಲ್ಲಿನ ಏರಿಕೆಯಿಂದಾಗಿ, ವಿದ್ಯುತ್ ಖರೀದಿ ವೆಚ್ಚದಲ್ಲಿ ಶೇಕಡಾ 16 ರಷ್ಟು ಏರಿಕೆ.
2) ನೌಕರರ ವೇತನ ಪರಿಷ್ಕರಣೆಯಿಂದಾಗಿ ಕಾರ್ಯ ಮತ್ತು ನಿರ್ವಹಣೆ ವೆಚ್ಚದಲ್ಲಿ ಶೇಕಡಾ 20 ರಷ್ಟು ಏರಿಕೆ.
3) ಬಡ್ಡಿ ಮತ್ತು ಹಣಕಾಸು ವೆಚ್ಚದಲ್ಲಿ ಶೇಕಡಾ 12 ರಷ್ಟು ಏರಿಕೆ.
4) ಸವಕಳಿ ದರದಲ್ಲಿ ಶೇಕಡಾ 22 ರಷ್ಟು ಏರಿಕೆ.
5) 2017-18 ನೇ ಸಾಲಿನ ಕೊರತೆಯಾದ 2,192.33 ಕೋಟಿ ರೂಪಾಯಿಗಳ ಹೊಂದಾಣಿಕೆ.

➢ ಬಂಡವಾಳ ಕಾಮಗಾರಿಗಳನ್ನು, ಸಾಲಗಳನ್ನು ಪಡೆಯುವ ಮೂಲಕ ಮಾಡಬೇಕಾಗಿರುವುದರಿಂದ, ಬಡ್ಡಿ, ಹಣಕಾಸು ಮತ್ತು ಸವಕಳಿ ವೆಚ್ಚದಲ್ಲಿ ಏರಿಕೆಯಾಗಿರುತ್ತದೆ.

**ಹೊಸ ದರ ಆದೇಶದ ಪ್ರಮುಖ ಅಂಶಗಳು:**

➢ ಹೆಚ್.ಟಿ. ಗ್ರಾಹಕರಿಗೆ ವಿಶೇಷ ಪ್ರೋತ್ಸಾಹ ಯೋಜನೆ (Special Incentive Scheme): ಆಯೋಗವು ವಿದ್ಯುತ್ ದರ ಆದೇಶ 2018 ರಲ್ಲಿ ಜಾರಿಗೆ ತಂದಿದ್ದ ವಿಶೇಷ ಪ್ರೋತ್ಸಾಹ ಯೋಜನೆಯನ್ನು ಮುಂದುವರಿಸಿದೆ. ಅದರಂತೆ, ಹೆಚ್.ಟಿ. ಗ್ರಾಹಕರಿಗೆ ಅವರ ಮೂಲ ಬಳಕೆಗಿಂತ ಹೆಚ್ಚಾಗಿ 10.00 ಘಂಟೆಯಿಂದ 18.00 ಘಂಟೆಗಳ ಸಮಯದಲ್ಲಿ ಬಳಸಿದ ವಿದ್ಯುಚ್ಛಕ್ತಿಗೆ ಪ್ರತಿ ಯೂನಿಟ್ಟಿಗೆ ರೂ.1/- ರಂತೆ ಪ್ರೋತ್ಸಾಹ (incentive) ಮತ್ತು ರಾತ್ರಿ ವೇಳೆ, ಅಂದರೆ 22.00 ಘಂಟೆಯಿಂದ 6.00 ಘಂಟೆಗಳ ಸಮಯದಲ್ಲಿ ಎಲ್ಲಾ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್ಟಿಗೆ ರೂ.2/- ರಂತೆ, ಪ್ರೋತ್ಸಾಹ (incentive) ನೀಡಲಾಗುವ ಒಂದು ವಿಶೇಷ ಪ್ರೋತ್ಸಾಹ ಯೋಜನೆಯನ್ನು ತರಲಾಗಿರುತ್ತದೆ. ಆದರೆ 6.00 ಘಂಟೆಯಿಂದ 10.00 ಘಂಟೆಯವರೆಗಿನ ಬೆಳಗಿನ ಗರಿಷ್ಠ ಸಮಯ (Peak hour) ಮತ್ತು 18.00 ಘಂಟೆಯಿಂದ 22.00 ಘಂಟೆಯವರೆಗಿನ ಸಾಯಂಕಾಲದ ಗರಿಷ್ಠ ಸಮಯದಲ್ಲಿ ವಿದ್ಯುಚ್ಛಕ್ತಿ ಬಳಕೆಗೆ

ToD (Time of Day) ದರವನ್ನು (ಪ್ರತಿ ಯೂನಿಟ್‌ಗೆ ರೂ.1/- ರಂತೆ ವಿಧಿಸುವ ದಂಡ) ಮುಂದುವರೆಸಲಾಗಿದೆ.

- ಆಯೋಗವು ಬೆಂಗಳೂರು ಮೆಟ್ರೊಗೆ, ಪ್ರತಿ ಯೂನಿಟ್ಟಿಗೆ ರೂ.5.20/- ರಂತೆ ರಿಯಾಯಿತಿ ದರವನ್ನು ಅನುಮೋದಿಸಿದೆ.
- ಪರಿಶುದ್ಧ ವಿದ್ಯುತ್ ಬಳಕೆ ಮತ್ತು ಇಂಗಾಲಾಮ್ಲ ಉತ್ಪತ್ತಿ ಕಡಿತ ಮಾಡುವ ದೃಷ್ಟಿಯಿಂದ, ರೈಲ್ವೆ ಟ್ರಾಕ್ಷನ್ ವಿದ್ಯುದೀಕರಣವನ್ನು ಪ್ರೋತ್ಸಾಹಿಸಲು, ರೈಲ್ವೆ ಟ್ರಾಕ್ಷನ್‌ಗೆ, ದಿನದ 24 ಘಂಟೆ, ಪ್ರತಿ ಯೂನಿಟ್ಟಿಗೆ ರೂ.6.20/- ರಂತೆ ವಿದ್ಯುತ್ ದರವನ್ನು ಆಯೋಗವು ಅನುಮೋದಿಸಿದೆ. ಈ ಗ್ರಾಹಕರಿಗೆ ToD (Time of Day) ಮತ್ತು ಸ್ಪೆಷಲ್ ಇನ್ಸೆಂಟೀವ್ ಸ್ಕೀಮ್ ಲಭ್ಯವಿರುವುದಿಲ್ಲ.
- ಗ್ರಾಹಕರ ವಿದ್ಯುತ್ ಸ್ಥಾವರಗಳ (Installations) ಆವರಣದಲ್ಲಿ ಸ್ಥಾಪಿತವಾದ ಎಫ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್‌ಗಳಿಗೆ ಮತ್ತು ಕೊಳಚೆ ನೀರು ಶುದ್ಧೀಕರಿಸುವ ಘಟಕಗಳಿಗೆ, ಆಯಾ ಸ್ಥಾವರಗಳಿಗೆ ಅನ್ವಯವಾಗುವ ವಿದ್ಯುತ್ ದರ ಅನ್ವಯಿಸುವುದನ್ನು ಮುಂದುವರೆಸಲಾಗಿದೆ.
- ಆಯೋಗವು ಘನತ್ಯಾಜ್ಯ ಸಂಸ್ಕರಣೆಯಿಂದಾಗುವ ಪರಿಸರ ಮತ್ತು ಸಾಮಾಜಿಕ ಅನುಕೂಲಗಳನ್ನು ಪರಿಗಣಿಸಿ, ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ (Solid waste processing plants), ಎಲ್.ಟಿ. ಮತ್ತು ಹೆಚ್.ಟಿ. ಕೈಗಾರಿಕಾ ವರ್ಗದ ದರ ಅನ್ವಯಿಸುವುದನ್ನು ಮುಂದುವರೆಸಲಾಗಿದೆ.
- ಗ್ರಾಹಕರ ಸಮಸ್ಯೆಯನ್ನು ಕಾಲ ಮಿತಿಯೊಳಗೆ ಪರಿಹರಿಸಲು, ಆಯೋಗವು ತನ್ನ ಹಿಂದಿನ ನಿರ್ದೇಶನವನ್ನು ಪುನರುಚ್ಚರಿಸುತ್ತಾ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ಉಪವಿಭಾಗದಲ್ಲಿ ಗ್ರಾಹಕ ಸಂಪರ್ಕ ಸಭೆಗಳನ್ನು, ಸಂಬಂಧಿಸಿದ ವ್ಯಾಪ್ತಿಯ ಅಧೀಕ್ಷಕ ಇಂಜಿನಿಯರು ಅಥವಾ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸುವಂತೆ ನಿರ್ದೇಶಿಸಿದೆ. ಅಂಥ ಸಭೆಗಳನ್ನು ನಡೆಸಲು ವಿಫಲವಾದಲ್ಲಿ, ಆಯೋಗವು ಪ್ರತಿ ಉಪವಿಭಾಗಕ್ಕೆ ಒಂದು ಲಕ್ಷ ರೂಪಾಯಿಯವರೆಗೂ ದಂಡ ಹಾಕಲಿದೆ. ಹಾಗೂ ಅಂತಹ ದಂಡವನ್ನು ಸಂಬಂಧಪಟ್ಟ ಅಧಿಕಾರಿಯು ಪಾವತಿ ಮಾಡಬೇಕಾಗುತ್ತದೆ.
- ಕರ್ನಾಟಕ ಸರ್ಕಾರದ ವಿದ್ಯುತ್ ವಾಹನ ಮತ್ತು ಇಂಧನ ಸಂಗ್ರಹ ನೀತಿಯನ್ನು ಹಾಗೂ ಶೇಕಡ 100 ರಷ್ಟು ವಿದ್ಯುತ್ ಚಲನಶೀಲತೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ, ಹಾಗೂ ಪರಿಸರ ಕಾಳಜಿಯ ದೃಷ್ಟಿಯಿಂದ, 2018ರ ಜಕಾತಿ ಆದೇಶದಲ್ಲಿ ಹೊಸದಾಗಿ ಜಾರಿಗೊಳಿಸಿದ್ದ, ವಿದ್ಯುತ್ ವಾಹನಗಳ ಚಾರ್ಜಿಂಗ್ ಸ್ಟೇಷನ್ ಗಳಿಗಾಗಿ, ಜಕಾತಿ LT6(C), ಯನ್ನು ಮುಂದುವರಿಸಿದೆ. ಈ ಜಕಾತಿಯು, LT

ಹಾಗು HT ಎರಡೂ ವರ್ಗಗಳಿಗೆ ಅನ್ವಯವಾಗಲಿದ್ದು, ಆಯೋಗವು ಪ್ರತಿ ಯೂನಿಟ್ಟಿಗೆ 5/– ರೂಪಾಯಿಯ ರಿಯಾಯಿತಿ ದರವನ್ನು ನಿಗದಿಪಡಿಸಿದೆ.

**ಆರ್ಥಿಕ ವರ್ಷ 2020 ರ ವಿದ್ಯುತ್ ದರ ಆದೇಶ 2019 ರ ಪ್ರಮುಖ ಅಂಶಗಳು:**

**ಗೃಹಬಳಕೆ ಗ್ರಾಹಕರಿಗೆ ಅನ್ವಯವಾಗುವ ದರಗಳು:**

ಬೆಸ್ಕಾಂ ವ್ಯಾಪ್ತಿಯ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರೆ ಪುರಸಭೆ ಪ್ರದೇಶಗಳಲ್ಲಿನ ಗೃಹ ಬಳಕೆ ಗ್ರಾಹಕರಿಗೆ ಹಾಗೂ ಸರ್ಕಾರಿ / ಧರ್ಮಾರ್ಥ ಸಂಸ್ಥೆಗಳು ನಡೆಸುವ ವಿದ್ಯಾ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ಸ್ಥಾವರಗಳ ದರಗಳಲ್ಲಿ ಮಾಡಿರುವ ಒಟ್ಟಾರೆ ಹೆಚ್ಚಳ ಪ್ರತಿ ಯೂನಿಟ್ಟಿಗೆ 25 ಪೈಸೆ. 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.50 ಅನ್ನು ರೂ.3.75 ಕ್ಕೆ ಏರಿಸಲಾಗಿದೆ ಮತ್ತು 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.4.95 ಅನ್ನು ರೂ.5.20 ಕ್ಕೆ ಏರಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.6.50 ಅನ್ನು ರೂ.6.75 ಕ್ಕೆ ಏರಿಸಲಾಗಿದೆ. ಇದುವರೆವಿಗೂ ಆರು (6) ಸ್ಲ್ಯಾಬ್‌ಗಳಲ್ಲಿ ವಿದಿಸಲಾಗುತ್ತಿದ್ದ ವಿದ್ಯುಚ್ಛಕ್ತಿ ದರಗಳನ್ನು ನಾಲಕ್ಕು (4) ಸ್ಲ್ಯಾಬ್‌ಗಳಿಗೆ ಮಾರ್ಪಡಿಸಲಾಗಿರುತ್ತದೆ. 201ರಿಂದ 300 ಯೂನಿಟ್‌ಗಳವರೆಗಿನ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.7.55 ರಿಂದ, 301 ರಿಂದ 400 ಯೂನಿಟ್‌ಗಳವರೆಗಿನ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.7.60 ರಿಂದ, ಹಾಗು 400 ಯೂನಿಟ್‌ಗಳಿಗೆ ಮೇಲ್ಪಟ್ಟ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.7.65 ರಿಂದ, ಕ್ರಮವಾಗಿ ಪ್ರತಿ ಯೂನಿಟ್‌ಗೆ 25 ಪೈಸೆ, 20 ಪೈಸೆ ಹಾಗೂ 15 ಪೈಸೆಗಳಂತೆ ಏರಿಕೆ ಮಾಡಿ, ದರವನ್ನು ಪ್ರತಿ ಯೂನಿಟ್‌ಗೆ ರೂ.7.80 ಕ್ಕೆ ನಿಗದಿಪಡಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಅಡಿಯ ಗ್ರಾಮೀಣ ಪ್ರದೇಶದ ಗೃಹ ಬಳಕೆದಾರರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ.3.40 ಅನ್ನು ರೂ.3.65 ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ.4.65 ಅನ್ನು ರೂ.4.90 ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.20 ರಿಂದ ರೂ.6.45 ಕ್ಕೆ ಹೆಚ್ಚಿಸಲಾಗಿದೆ. ಇದುವರೆವಿಗೂ ಐದು (5) ಸ್ಲ್ಯಾಬ್‌ಗಳಲ್ಲಿ ವಿದಿಸಲಾಗುತ್ತಿದ್ದ ವಿದ್ಯುಚ್ಛಕ್ತಿ ದರಗಳನ್ನು ನಾಲಕ್ಕು (4) ಸ್ಲ್ಯಾಬ್‌ಗಳಿಗೆ ಮಾರ್ಪಡಿಸಲಾಗಿರುತ್ತದೆ. 201ರಿಂದ 300 ಯೂನಿಟ್‌ಗಳವರೆಗಿನ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.7.05 ರಿಂದ, 300 ಯೂನಿಟ್‌ಗಳಿಗೆ ಮೇಲ್ಪಟ್ಟ ಬಳಕೆಯ ದರವನ್ನು

ಪ್ರತಿ ಯೂನಿಟ್‌ಗೆ ರೂ.7.10 ರಿಂದ, ಕ್ರಮವಾಗಿ ಪ್ರತಿ ಯೂನಿಟ್‌ಗೆ 25 ಪೈಸೆ ಹಾಗೂ 20 ಪೈಸೆ ಪೈಸೆಗಳಂತೆ ಏರಿಕೆ ಮಾಡಿ, ದರವನ್ನು ಪ್ರತಿ ಯೂನಿಟ್‌ಗೆ ರೂ.7.30 ಕ್ಕೆ ನಿಗದಿಪಡಿಸಲಾಗಿದೆ.

ಇತರೆ ಎಲ್ಲಾ ಎಸ್ಕಾಂಗಳ ನಗರ ಪಾಲಿಕೆ ಹಾಗೂ ಪುರಸಭೆ ಪ್ರದೇಶಗಳಲ್ಲಿನ ಗೃಹ ಬಳಕೆಯ ಗ್ರಾಹಕರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.45 ಅನ್ನು ರೂ.3.70 ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.4.95 ಅನ್ನು ರೂ.5.20 ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.50 ರಿಂದ ರೂ.6.75 ಕ್ಕೆ ಹಾಗೂ 200 ಯೂನಿಟ್‌ಗೆ ಮೇಲ್ಪಟ್ಟ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.7.55 ರಿಂದ ರೂ.7.80 ಕ್ಕೆ ಹೆಚ್ಚಿಸಲಾಗಿದೆ.

ಇತರೆ ಎಲ್ಲಾ ಎಸ್ಕಾಂಗಳ ಗ್ರಾಮ ಪಂಚಾಯತಿಗಳ ಪ್ರದೇಶಗಳಲ್ಲಿನ ಗೃಹ ಬಳಕೆ ಗ್ರಾಹಕರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.35 ಅನ್ನು ರೂ.3.60 ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.4.65 ಅನ್ನು ರೂ.4.90 ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.20 ರಿಂದ ರೂ.6.45 ಕ್ಕೆ ಹಾಗೂ 200 ಯೂನಿಟ್‌ಗೆ ಮೇಲ್ಪಟ್ಟ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.7.05 ರಿಂದ ರೂ.7.30 ಕ್ಕೆ ಹೆಚ್ಚಿಸಲಾಗಿದೆ.

**ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:**

ರಾಜ್ಯದ ಎಲ್ಲಾ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿನ ಏರಿಕೆ ಪ್ರತಿಯೂನಿಟ್‌ಗೆ 15 ಪೈಸೆಯಿಂದ 20 ಪೈಸೆಯವರೆಗೆ ಇರುತ್ತದೆ. ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ ಪುರಸಭೆಗಳ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ, ಪರಿಷ್ಕೃತ ದರಗಳು ಮೊದಲ 500 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.65 (ಈಗಿರುವ ದರ ರೂ.5.50) ಹಾಗೂ 500 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.95 (ಈಗಿರುವ ದರ ರೂ.6.75) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯ ಇತರ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಪರಿಷ್ಕೃತ ದರಗಳು ಮೊದಲ 500 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.35 (ಈಗಿರುವ ದರ ರೂ.5.20), 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿ ಯೂನಿಟ್‌ಗೆ ರೂ.6.30

(ಈಗಿರುವ ದರ ರೂ.6.10) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.60 (ಈಗಿರುವ ದರ ರೂ.6.40) ಆಗುತ್ತದೆ.

ಇತರೆ ಎಸ್ಕಾಂಗಳ ವ್ಯಾಪ್ತಿಯ ಪುರಸಭೆ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರಗಳು–ಮೊದಲ 500 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.45 (ಈಗಿರುವ ದರ ರೂ.5.30), 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿ ಯೂನಿಟ್‌ಗೆ ರೂ.6.45 (ಈಗಿರುವ ದರ ರೂ.6.25) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.75 (ಈಗಿರುವ ದರ ರೂ.6.55) ಆಗುತ್ತದೆ.

ಇತರೆ ಎಲ್ಲಾ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಹೊಸ ದರಗಳು– ಮೊದಲ 500 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.35 (ಈಗಿರುವ ದರ ರೂ. 5.20), 501 ಯೂನಿಟ್‌ನಿಂದ 1000 ಯೂನಿಟ್‌ಗಳವರೆಗೆ ಪ್ರತಿ ಯೂನಿಟ್‌ಗೆ ರೂ.6.30 (ಈಗಿರುವ ದರ ರೂ.6.10) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.60 (ಈಗಿರುವ ದರ ರೂ.6.40) ಆಗುತ್ತದೆ.

ರಾಜ್ಯದ ಎಲ್ಲಾ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿನ ಏರಿಕೆ ಪ್ರತಿ ಯೂನಿಟ್‌ಗೆ 20 ಪೈಸೆಗಳಷ್ಟು ಇರುತ್ತದೆ. ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರೆ ಪುರಸಭೆ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಅನ್ವಯವಾಗುವ ಹೊಸ ದರ ಪ್ರತಿ ಯೂನಿಟ್‌ಗೆ ರೂ.7.10 (ಈಗಿರುವ ದರ ರೂ.6.90) ಹಾಗೂ ಒಂದು ಲಕ್ಷ ಯೂನಿಟ್‌ಗಳಿಗಿಂತ ಹೆಚ್ಚಾದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.40 (ಈಗಿರುವ ದರ ರೂ.7.20) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯಲ್ಲಿನ ಉಳಿದ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.00 (ಈಗಿರುವ ದರ ರೂ.6.80) ಹಾಗೂ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.20 (ಈಗಿರುವ ದರ ರೂ.7.00) ಆಗುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ

ಯೂನಿಟ್‌ಗೆ ರೂ.6.95 (ಈಗಿರುವ ದರ ರೂ.6.75) ಹಾಗೂ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.20 (ಈಗಿರುವ ದರ ರೂ.7.00) ಆಗುತ್ತದೆ.

**ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:**

ಎಲ್.ಟಿ. ವಾಣಿಜ್ಯ ಪ್ರವರ್ಗದ ಬಳಕೆದಾರರಿಗೆ ದರ ಏರಿಕೆ ಪ್ರತಿ ಯೂನಿಟ್‌ಗೆ 25 ಪೈಸೆ ಆಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರೆ ಪುರಸಭೆ ಪ್ರದೇಶಗಳನ್ನು ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿನ ಹೊಸ ದರ, ಮೊದಲ 50 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.00 (ಈಗಿರುವ ದರ ರೂ.7.75) ಹಾಗೂ 50 ಯೂನಿಟ್‌ಗಳು ಮೀರಿದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.9.00 (ಈಗಿರುವ ದರ ರೂ.8.75) ಆಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿನ ಹೊಸ ದರ, ಮೊದಲ 50 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.50 (ಈಗಿರುವ ದರ ರೂ.7.25) ಹಾಗೂ 50 ಯೂನಿಟ್‌ಗಳು ಮೀರಿದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.50 (ಈಗಿರುವ ದರ ರೂ.8.25) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 20 ಪೈಸೆಗಳ ಏರಿಕೆಯಾಗಿರುತ್ತದೆ. ಮೊದಲ 2 ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.90 (ಈಗಿರುವ ದರ ರೂ.8.70) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.9.00 (ಈಗಿರುವ ದರ ರೂ.8.80) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯ ಇತರೆ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 20 ಪೈಸೆಗಳ ಏರಿಕೆಯಾಗಿರುತ್ತದೆ. ಹೊಸ ದರ, ಮೊದಲ 2 ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.70 (ಈಗಿರುವ ದರ ರೂ.8.50) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.80 (ಈಗಿರುವ ದರ ರೂ.8.60) ಆಗುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 20 ಪೈಸೆಗಳ ಏರಿಕೆಯಾಗಿರುತ್ತದೆ. ಹೊಸ ದರ, ಮೊದಲ 2 ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.65 (ಈಗಿರುವ ದರ ರೂ.8.45) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.75 (ಈಗಿರುವ ದರ ರೂ.8.55) ಆಗುತ್ತದೆ.

**ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ:**

ಆಯೋಗವು ಕುಡಿಯುವ ನೀರು ಸರಬರಾಜು ಮಾಡುವ ಎಲ್.ಟಿ. ಸ್ಥಾವರಗಳಲ್ಲಿ ಬಳಸಲಾಗುವ ವಿದ್ಯುಚ್ಛಕ್ತಿಗೆ ದರವನ್ನು ಪ್ರತಿ ಯೂನಿಟ್‌ಗೆ ಈಗಿರುವ ರೂ.4.40 ರಿಂದ ರೂ.4.60 ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್‌ಗೆ 20 ಪೈಸೆಯಷ್ಟು ಕನಿಷ್ಠ ಏರಿಕೆ ಮಾಡಿರುತ್ತದೆ. ಹೆಚ್.ಟಿ ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ ಕೂಡ ಪ್ರತಿ ಯೂನಿಟ್‌ಗೆ ಈಗಿರುವ ದರವನ್ನು ರೂ.5.00 ರಿಂದ ರೂ.5.20 ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್‌ಗೆ 20 ಪೈಸೆಗಳ ಏರಿಕೆ ಮಾಡಿರುತ್ತದೆ.

**ಎಲ್.ಇ.ಡಿ. / ಇಂಡಕ್ಷನ್ ಬೀದಿ ದೀಪಗಳಿಗೆ ರಿಯಾಯಿತಿ ವಿದ್ಯುತ್ ದರ:**

ಆಯೋಗವು, ಬೀದಿದೀಪ ಸ್ಥಾವರಗಳಿಗೆ ಮಿತ ವಿದ್ಯುತ್ ಬಳಸುವ ಎಲ್.ಇ.ಡಿ. / ಇಂಡಕ್ಷನ್ ಬಲ್ಬ್‌ಗಳನ್ನು ಅಳವಡಿಸಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ನಗರ ಮತ್ತು ಗ್ರಾಮೀಣ ಸ್ಥಳಿಯ ಸಂಸ್ಥೆಗಳಿಗೆ, ಬಳಸಿದ ಪ್ರತಿ ಯೂನಿಟ್‌ಗೆ, ರೂ.1/– ರ ರಿಯಾಯಿತಿ ನೀಡಿ, ಪ್ರತಿ ಯೂನಿಟ್‌ಗೆ ಈಗಿರುವ ಪ್ರೋತ್ಸಾಹ ದರವನ್ನು, ಬೆ.ವಿ.ಸ.ಕಂ ನ ವ್ಯಾಪ್ತಿಯಲ್ಲಿ ರೂ.5.10 ರಿಂದ ರೂ.5.30 ಕ್ಕೆ, ಉಳಿದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ವ್ಯಾಪ್ತಿಯಲ್ಲಿ ಈಗಿರುವ ದರವನ್ನು ರೂ.5.05 ರಿಂದ ರೂ.5.25 ಕ್ಕೆ ಪರಿಷ್ಕೃತ ದರವನ್ನು ನಿಗದಿಪಡಿಸಿದೆ. ಇತರೆ ಬೀದಿ ದೀಪ ಸ್ಥಾವರಗಳಿಗೆ ಅನ್ವಯವಾಗುವ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ಬೆ.ವಿ.ಸ.ಕಂ ನ ವ್ಯಾಪ್ತಿಯಲ್ಲಿ ರೂ.6.30 (ಈಗಿರುವ ದರ ರೂ.6.10), ಉಳಿದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ವ್ಯಾಪ್ತಿಯಲ್ಲಿ ಪ್ರತಿ ಯೂನಿಟ್‌ಗೆ ರೂ.6.25 (ಈಗಿರುವ ದರ ರೂ.6.05) ಆಗುತ್ತದೆ.

**ವಿದ್ಯಾ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು:**

ಆಯೋಗವು, ಎಲ್.ಟಿ. ಪ್ರವರ್ಗದಡಿ ಬರುವ ಖಾಸಗಿ ವಿದ್ಯಾಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ದರಗಳನ್ನು ಪ್ರತಿ ಯೂನಿಟ್‌ಗೆ 20 ಪೈಸೆಗಳವರೆಗೆ ಹೆಚ್ಚಿಸಿದೆ. ಬೆಸ್ಕಾಂ ವ್ಯಾಪ್ತಿಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪುರಸಭೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.6.95 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.75) ಹಾಗೂ 200 ಯೂನಿಟ್‌ಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.8.20 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.8.00) ಅನ್ನು ನಿಗದಿಪಡಿಸಿರುತ್ತದೆ. ಇತರೆ ಎಲ್ಲಾ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.40 (ಈಗಿರುವ ದರ ಪ್ರತಿ ಯೂನಿಟ್‌ಗೆ

ರೂ.6.20) ಹಾಗೂ 200 ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.65 ದರ (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.45) ಅನ್ನು ನಿಗದಿಪಡಿಸಿರುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಪುರಸಭೆ ಹಾಗೂ ನಗರ ಸ್ಥಳಿಯ ಸಂಸ್ಥೆಗಳ ಪ್ರದೇಶಗಳಲ್ಲಿನ ಎಲ್.ಟಿ. ಪ್ರವರ್ಗಕ್ಕೆ ಮೊದಲ 200 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.6.90 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.70) ಹಾಗೂ 200 ಯೂನಿಟ್‌ಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.15 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.95) ಅನ್ನು ನಿಗದಿಪಡಿಸಿರುತ್ತದೆ. ಇತರೆ ಎಲ್ಲಾ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.35 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.15) ಹಾಗೂ 200 ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.60 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.40) ಅನ್ನು ನಿಗದಿಪಡಿಸಿರುತ್ತದೆ.

ಹೆಚ್.ಟಿ. ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಬೆಸ್ಕಾಂ ವ್ಯಾಪ್ತಿಯಲ್ಲಿನ ಸರ್ಕಾರಿ ಆಸ್ಪತ್ರೆಗಳು ಮತ್ತು ಧರ್ಮಾರ್ಥ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಹಾಗೂ ಸರ್ಕಾರಿ ವಿದ್ಯಾ ಸಂಸ್ಥೆಗಳು ಮತ್ತು ಅನುದಾನಿತ ವಿದ್ಯಾ ಸಂಸ್ಥೆಗಳ ಮೊದಲ ಒಂದು ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಮಾಸಿಕ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.85 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.65) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.25 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.05) ಆಗುತ್ತದೆ. ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪ್ರದೇಶಗಳಲ್ಲಿ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.80 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.60) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.20 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.00) ಆಗುತ್ತದೆ.

ಹೆಚ್.ಟಿ ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಬೆಸ್ಕಾಂ ವ್ಯಾಪ್ತಿಯಲ್ಲಿನ ಖಾಸಗಿ ವಿದ್ಯಾ ಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.7.85 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.65) ಹಾಗೂ ಒಂದು ಲಕ್ಷಕ್ಕಿಂತ ಹೆಚ್ಚಿನ ಯೂನಿಟ್‌ಗಳ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.25 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.8.05) ಆಗುತ್ತದೆ. ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿ ಪ್ರದೇಶಗಳಲ್ಲಿ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ

ಯೂನಿಟ್‌ಗೆ ರೂ.7.80 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.60) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.20 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.8.00) ಆಗುತ್ತದೆ.

**ಹಸಿರು ದರ (Green Tariff):**

ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುಚ್ಛಕ್ತಿಯ ಖರೀದಿ ಮತ್ತು ಉಪಯೋಗವನ್ನು ಉತ್ತೇಜಿಸಲು ಹೆಚ್.ಟಿ. ಕೈಗಾರಿಕೆ ಮತ್ತು ಹೆಚ್.ಟಿ. ವಾಣಿಜ್ಯ ಗ್ರಾಹಕರಿಗೆ ಅವರು ಇಚ್ಛಿಸಿದಲ್ಲಿ ಅವರಿಗೆ ಅನ್ವಯವಾಗುವ ದರಕ್ಕಿಂತ ಪ್ರತಿ ಯೂನಿಟ್‌ಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಮುಂದುವರೆಸಿದೆ.

**ಸರ್ಕಾರದ ಸಹಾಯಧನ:**

10 ಹೆಚ್.ಪಿ. ವರೆಗಿನ ಸಾಮರ್ಥ್ಯದ 28.40 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಹಾಗೂ 28.19 ಲಕ್ಷ ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗೆ, ಉಚಿತ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ, 2018-19 ನೇ ಸಾಲಿಗೆ ಸರ್ಕಾರ ಕೊಡಬೇಕಾದ ಸಹಾಯಧನದ ಮೊತ್ತವಾದ ರೂ.11,048.37 ಕೋಟಿಗಳ ಪ್ರತಿಯಾಗಿ 2019-20 ನೇ ಸಾಲಿನಲ್ಲಿ ಕೊಡಬೇಕಾದ ಅಂದಾಜು ಮೊತ್ತ ರೂ.11,892.45 ಕೋಟಿಗಳು. ಆರ್ಥಿಕ ವರ್ಷ 2020 ರಲ್ಲಿ ನೀರಾವರಿ ಪಂಪ್‌ಸೆಟ್‌ಗಳು ಮತ್ತು ಭಾಗ್ಯಜ್ಯೋತಿ / ಕುಟೀರಜ್ಯೋತಿ ಗ್ರಾಹಕರ ಅಂದಾಜು ಬಳಕೆ 21,764.865 ದಶಲಕ್ಷ ಯೂನಿಟ್‌ಗಳು.

**ವಿದ್ಯುತ್ ಸರಬರಾಜು ಕಂಪನಿಗಳ 2019-20 ನೇ ಸಾಲಿನ ವಾರ್ಷಿಕ ಕಂದಾಯ ಬೇಡಿಕೆ (ARR):**

ಆಯೋಗವು, ಬಹು ವಾರ್ಷಿಕ ದರ ವಿನಿಯಾಮವಳಿಗಳ ತತ್ವಗಳನ್ನು ಆಧರಿಸಿ, ಆರ್ಥಿಕ ವರ್ಷ 2020, 2021 ಹಾಗೂ 2022 ಕ್ಕೆ, ವಾರ್ಷಿಕ ಕಂದಾಯ ಬೇಡಿಕೆಯನ್ನು ನಿಗದಿಪಡಿಸಿರುತ್ತದೆ. ಹಾಗೂ ಆಯೋಗವು, ಎಲ್ಲಾ ವಿದ್ಯುತ್ ವಿತರಣಾ ಪರವಾನಗಿದಾರರ ಆರ್ಥಿಕ ವರ್ಷ 2018 ರ ವಾರ್ಷಿಕ ಕಾರ್ಯ ನಿರ್ವಹಣೆ ಪುನರ್ಮನನ ಮಾಡಿದ್ದು, ಹೆಚ್ಚುವರಿ / ಕೊರತೆಯನ್ನು, 2020ರ ಆರ್ಥಿಕ ವರ್ಷದ ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆಗೆ ಸೇರಿಸಲಾಗಿದೆ.

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು 2019-20, 2020-21 ಹಾಗು 2021-22 ನೇ ಸಾಲಿಗೆ ವಿದ್ಯುತ್ ದರ ಪರಿಶೀಲನೆಗಾಗಿ ಸಲ್ಲಿಸಿದ್ದ ಅರ್ಜಿಗಳನ್ನು / ವಾರ್ಷಿಕ ಕಂದಾಯ ಬೇಡಿಕೆ ಅರ್ಜಿಗಳನ್ನು ಕೂಲಂಕುಷವಾಗಿ ಪರೀಶೀಲಿಸಿದ ನಂತರ ಆಯೋಗವು, 59,400.07, 62,104.94 ಹಾಗು 64,967.15 ದಶಲಕ್ಷ ಯೂನಿಟ್‌ಗಳ (FY20, FY21 ಹಾಗು FY22 ಆರ್ಥಿಕ ವರ್ಷಗಳಲ್ಲಿನ, ಶೇ.3.16, ಶೇ.3.13 & ಶೇ.3.10 ರಷ್ಟು ವಿದ್ಯುತ್ ಪ್ರಸರಣ ನಷ್ಟ ಮತ್ತು ಶೇ.12.97, ಶೇ.12.77 & ಶೇ.12.58 ರಷ್ಟು ವಿದ್ಯುತ್ ವಿತರಣಾ ನಷ್ಟ

ಹೊರತುಪಡಿಸಿದಂತೆ) ವಿದ್ಯುತ್ ಮಾರಾಟ ಮಾಡಲಿರುವ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒಟ್ಟು ರೂ.42,778.32, ರೂ.46,201.55 ಹಾಗು ರೂ.49,380.60 ಕೋಟಿಗಳ, ಒಟ್ಟಾರೆ ಖರ್ಚು (ವಾರ್ಷಿಕ ಕಂದಾಯ ಬೇಡಿಕೆ) ಅನ್ನು ಅನುಮೋದಿಸಿದೆ.

FY20, FY21 ಹಾಗು FY22 ರ ಸಾಲಿನಲ್ಲಿ 70,905.56, 73,971.94 ಹಾಗು 77,192.34 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿಯನ್ನು ವಿದ್ಯುತ್ ಸರಬರಾಜು ಕಂಪನಿಗಳು ಖರೀದಿ ಮಾಡಲಿವೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಆರ್ಥಿಕ ವರ್ಷ 2019-20 ಕ್ಕೆ ವಾರ್ಷಿಕ ಕಂದಾಯ ಬೇಡಿಕೆಯಾದ ರೂ. 21,274.42 ಕೋಟಿಗಳೊಂದಿಗೆ ರಾಜ್ಯದ ಒಟ್ಟು ವಿದ್ಯುಚ್ಛಕ್ತಿ ಖರೀದಿಯ ಶೇ.47.89 ರಷ್ಟು ಪ್ರಮಾಣದ 33,960.83 ದಶಲಕ್ಷ ಯೂನಿಟ್‌ಗಳ ವಿದ್ಯುತ್‌ನ್ನು ಖರೀದಿಸಲಿದೆ.

5 ನೇ ನಿಯಂತ್ರಣ ಅವಧಿಗೆ, ಅಂದರೆ, ಆರ್ಥಿಕ ವರ್ಷ 2020 ರಿಂದ 2022 ರವರೆಗಿನ ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ (ARR), ವಿದ್ಯುತ್ ಮಾರಾಟ ಪ್ರಮಾಣ, ವಿದ್ಯುತ್ ಖರೀದಿ ಪ್ರಮಾಣ ಗಳ ಸಾರಾಂಶವು ಕೆಳಕಂಡಂತೆ ಇರುತ್ತದೆ:

| ಕ್ರ. ಸಂ | ವಿಷಯ | FY20 | FY21 | FY22 | Remarks |
|---|---|---|---|---|---|
| 1 | ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ (ARR) ಕೋಟಿ ರೂ. ಗಳಲ್ಲಿ (ಎಲ್ಲಾ ವಿ.ಸ.ಕಂ ಗಳಿಗೆ) | 42,778.32 | 46,201.55 | 49,380.60 | |
| 2 | ಆಯೋಗವು ಅನುಮೋದಿಸಿದ ವಾರ್ಷಿಕ ಕಂದಾಯ ಬೇಡಿಕೆ (ARR) ಕೋಟಿ ರೂ. ಗಳಲ್ಲಿ (HRECS ಗೆ) | 176.79 | 200.50 | 214.62 | |
| 2 | ಅನುಮೋದಿಸಿದ ವಿದ್ಯುತ್ ಮಾರಾಟ ಪ್ರಮಾಣ, ದಶ ಲಕ್ಷ ಯೂನಿಟ್ ಗಳಲ್ಲಿ | 59,400.07 | 62,104.94 | 64,967.15 | ಅನುಮೋದಿಸಿದ ಪ್ರಸರಣಾ ಹಾಗು ವಿತರಣಾ ನಷ್ಟವನ್ನು ಹೊರತುಪಡಿಸಿ. |
| 3 | ಅನುಮೋದಿಸಿದ ಶೇ. ಪ್ರಸರಣಾ ನಷ್ಟ | 3.162 | 3.132 | 3.102 | |
| 4 | ಅನುಮೋದಿಸಿದ ಶೇ. ವಿತರಣಾ ನಷ್ಟ | 12.97 | 12.77 | 12.58 | |
| 5 | ಅನುಮೋದಿಸಿದ ವಿದ್ಯುತ್ ಖರೀದಿ ಪ್ರಮಾಣ, ದಶ ಲಕ್ಷ ಯೂನಿಟ್ ಗಳಲ್ಲಿ | 70,905.56 | 73,971.94 | 77,192.34 | FY19 - 68,266.16 **ದಶ ಲಕ್ಷ ಯೂನಿಟ್** |

ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವು, ವಿದ್ಯುತ್ ಖರೀದಿ ವೆಚ್ಚದಲ್ಲಿ ಒಟ್ಟಾರೆ ಏರಿಕೆ ಮತ್ತು ಕಾರ್ಯಾಚರಣೆ ವೆಚ್ಚಗಳಲ್ಲಿ ಏರಿಕೆ ಉಲ್ಲೇಖಿಸಿ, ಆರ್ಥಿಕ ವರ್ಷ 2018 ರ ವಾರ್ಷಿಕ ಕಾರ್ಯ ನಿರ್ವಹಣೆ ಪುನರ್ಮನನ ಮತ್ತು 2019-20 ನೇ ಸಾಲಿಗೆ ಪರಿಷ್ಕೃತ ವಿದ್ಯುತ್ ದರಗಳ ಪ್ರಸ್ತಾವನೆಗಳೊಂದಿಗೆ, ಆರ್ಥಿಕ ವರ್ಷ 2019-20, 2020-21 ಮತ್ತು 2021-22 ರ ವಾರ್ಷಿಕ ಕಂದಾಯ ಬೇಡಿಕೆಗಳಿಗೆ, ಆಯೋಗದ ಅನುಮೋದನೆಗಾಗಿ ಅರ್ಜಿಗಳನ್ನು ಸಲ್ಲಿಸಿದ್ದವು. 2019-20, 2020-21 ಮತ್ತು 2021-22 ನೇ ಸಾಲಿಗೆ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ (ARR) (ಆರ್ಥಿಕ ವರ್ಷ 2018 ರ ಮುಂದೊಯ್ದ ಕೊರತೆಯನ್ನು ಸೇರಿದಂತೆ), ಈ ಕೆಳಕಂಡಂತೆ ಇವೆ:

**2019-20, 2020-21 ಮತ್ತು 2021-22 *ನೇ ಸಾಲಿನ, ವಿದ್ಯುತ್ ಸರಬರಾಜು ಕಂಪೆನಿವಾರು, ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ***

*(ರೂ. ಕೋಟಿಗಳಲ್ಲಿ)*

| ವಿದ್ಯುತ್ ಸರಬರಾಜು ಪರವಾನಿಗೆದಾರ | FY20 | | FY21 | | FY22 | |
|---|---|---|---|---|---|---|
| | ಸಲ್ಲಿಸಿದಂತೆ | ಅನುಮೋದಿಸಿದಂತೆ | ಸಲ್ಲಿಸಿದಂತೆ | ಅನುಮೋದಿಸಿದಂತೆ | ಸಲ್ಲಿಸಿದಂತೆ | ಅನುಮೋದಿಸಿದಂತೆ |
| ಬೆ.ವಿ.ಸ.ಕಂ | 23,676.25 | 21,274.42 | 25,954.36 | 22,953.02 | 27,622.02 | 24,528.17 |
| ಮ.ವಿ.ಸ.ಕಂ | 4,153.51 | 3,603.24 | 3,753.02 | 3,847.76 | 3,973.74 | 4,048.08 |
| ಚಾ.ವಿ.ಸ.ನಿ.ನಿ | 4,828.79 | 4,342.44 | 4,912.83 | 4,688.42 | 5,292.74 | 5,020.70 |
| ಹು.ವಿ.ಸ.ಕಂ | 10,007.25 | 8,309.80 | 10,498.33 | 9,000.57 | 11,134.44 | 9,624.43 |
| ಗು.ವಿ.ಸ.ಕಂ | 6,093.89 | 5,248.42 | 6,113.64 | 5,711.78 | 6,663.72 | 6,159.22 |
| ಹುಕ್ಕೇರಿ ಆರ್.ಇ.ಸಿ.ಎಸ್ | 234.39 | 176.80 | 244.05 | 200.50 | 278.95 | 214.62 |
| ಒಟ್ಟು | **48,994.08** | **42,955.11** | **51,476.23** | **46,402.05** | **54,965.61** | **49,595.22** |

**ಆರ್ಥಿಕ ವರ್ಷ 2020 ರ ಕಂದಾಯ ಕೊರತೆ:**

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಆರ್ಥಿಕ ವರ್ಷ 2018 ರ ವಾರ್ಷಿಕ ಕಾರ್ಯ ನಿರ್ವಹಣಾ ಪುನರ್ಮನನದಲ್ಲಿ ರೂ. 748.21 ಕೋಟಿ ಕಂದಾಯ ಕೊರತೆಯನ್ನು ಆಯೋಗವು ನಿರ್ಧರಿಸಿದೆ. ಸದರಿ ಕಂದಾಯ ಕೊರತೆಯೊಂದಿಗೆ ಆರ್ಥಿಕ

ವರ್ಷ 2020 ಕ್ಕೆ ಅಂದಾಜಿಸಿದ ಕಂದಾಯ ಹೆಚ್ಚಳ ಕೊರತೆ ರೂ.1,217.38 ಕೋಟಿಗಳನ್ನು ಗಣನೆಗೆ ತೆಗೆದುಕೊಂಡ ನಂತರ ಒಟ್ಟಾರೆ ಕೊರತೆ ರೂ.1,965.59 ಕೋಟಿಯಾಗಿದ್ದು, ಅದನ್ನು ಆರ್ಥಿಕ ವರ್ಷ 2020 ರಲ್ಲಿ ದರ ಹೆಚ್ಚಳದಿಂದ ವಸೂಲು ಮಾಡಬೇಕಿದೆ.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆ.ಪಿ.ಟಿ.ಸಿ.ಎಲ್) 2019-20, 2020-21, 2021-22 ರ ವಿದ್ಯುತ್ ಪ್ರಸರಣ ದರ:**

ಆಯೋಗವು ಆರ್ಥಿಕ ವರ್ಷ 2018 ರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನದ ಅನುಸಾರ ಮುಂದೊಯ್ದ ರೂ.112.47 ಕೋಟಿ ಕೊರತೆಯನ್ನು ಸೇರಿಸಿಕೊಂಡು, ಆರ್ಥಿಕ ವರ್ಷ 2020, 2021 & 2022 ನೇ ಸಾಲಿಗೆ ಕ್ರಮವಾಗಿ ರೂ.3,506.24, ರೂ.3,645.17 ಹಾಗು ರೂ.3,910.48 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ಅನುಮೋದಿಸಿದೆ. 2018-19 ರ ಸಾಲಿಗೆ ಆಯೋಗ ಅನುಮೋದಿಸಿದ್ದ, ಕ.ವಿ.ಪ್ರ.ನಿ.ನಿ.ಕ್ಕೆ ಪಾವತಿಸಬೇಕಾದ ಪ್ರಸರಣ ದರವಾದ ರೂ.1,15,776 (ಪ್ರತಿ ಮೆ.ವ್ಯಾ. / ತಿಂಗಳಿಗೆ) ಗಳ ಪ್ರತಿಯಾಗಿ, ಪ್ರಸರಣ ದರವನ್ನು ಆರ್ಥಿಕ ವರ್ಷ 2019-20, 2020-21 ಹಾಗು 2021-22 ಕ್ಕೆ, ಕ್ರಮವಾಗಿ ಪ್ರತಿ ಮೆ.ವ್ಯಾ. / ತಿಂಗಳಿಗೆ ರೂ.1,33,644/-, ರೂ.1,31,711/- ಹಾಗು ರೂ.1,33,758/- ಅನ್ನು ನಿಗದಿಪಡಿಸಿದೆ. ಆರ್ಥಿಕ ವರ್ಷ 2019-20 ರ ಈ ಪರಿಷ್ಕೃತ ಪ್ರಸರಣ ದರ ವನ್ನು, ವಿದ್ಯುತ್ ಕಂಪನಿಗಳಿಗೆ ಅನುಮೋದಿಸಿದ ವಿದ್ಯುತ್ ಖರೀದಿ ವೆಚ್ಚದೊಂದಿಗೆ ಸೇರಿಸಿಕೊಂಡು, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ, ವಿದ್ಯುತ್ ದರ ಪರಿಷ್ಕರಣೆಯನ್ನು ಅನುಮೋದಿಸಿದೆ.

**ಮಂಗಳೂರು (MSEZL) ವಿಶೇಷ ಆರ್ಥಿಕ ವಲಯಕ್ಕೆ ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧರಣೆ:**

ಆಯೋಗವು, ಆರ್ಥಿಕ ವರ್ಷ 2020, 2021 ಹಾಗು 2022 ಕ್ಕೆ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ (MSEZL) ರೂ.44.14, ರೂ.48.53 ಹಾಗು ರೂ.51.19 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಮಂಗಳೂರು ವಿಶೇಷ ಆರ್ಥಿಕ ವಲಯ, ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.7.15 ರಂತೆ ಪರಿಷ್ಕೃತ ಚಿಲ್ಲರೆ ವಿದ್ಯುತ್ ದರಗಳನ್ನು ನಿಗದಿಪಡಿಸಿದೆ.

**ಏಕಸ್ (AEQUS SEZ) ವಿಶೇಷ ಆರ್ಥಿಕ ವಲಯಕ್ಕೆ ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧರಣೆ:**

ಆಯೋಗವು, ಆರ್ಥಿಕ ವರ್ಷ 2020, 2021 ಹಾಗು 2022 ಕ್ಕೆ, ಏಕಸ್ (AEQUS SEZ) ವಿಶೇಷ ಆರ್ಥಿಕ ವಲಯಕ್ಕೆ ರೂ.19.25, ರೂ.21.86 ಹಾಗು ರೂ.23.89 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು

ನಿರ್ಧರಿಸಿದೆ. ಏಕಸ್ (AEQUS) ವಿಶೇಷ ಆರ್ಥಿಕ ವಲಯದ, ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.6.80 ರಂತೆ ಪರಿಷ್ಕೃತ ಚಿಲ್ಲರೆ ವಿದ್ಯುತ್ ದರಗಳನ್ನು ನಿಗದಿಪಡಿಸಿದೆ.

*****

**ಟಿಪ್ಪಣಿ: ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿದ್ಯುತ್‌ದರ ವಿವರಗಳನ್ನು ಲಗತ್ತಿಸಿದೆ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಮಂಗಳೂರು ಮತ್ತು ಏಕಸ್ (AEQUS) ವಿಶೇಷ ಆರ್ಥಿಕ ವಲಯ (SEZ) ಗಳಿಗೆ ಸಂಬಂಧಿಸಿದ ದರ ಪರಿಷ್ಕರಣ ಆದೇಶಗಳ ಸಂಪೂರ್ಣ ವಿವರಗಳನ್ನು ಆಯೋಗದ ವೆಬ್‌ಸೈಟ್ *www.karnataka.gov.in/kerc* ನಲ್ಲಿ ಪ್ರಕಟಿಸಲಾಗಿದೆ.**